**ದಿನಾಂಕಃ 19-11-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀಸವಾಲುಃ** ಶ್ರೀ ಎಂ ನಾಗೇಶ್ ವಕೀಲರಿಂದ ವಾದಿಯ ಪರವಾಗಿ .

ದಿಃ 12–09–1965 ರಂದು ಆದ ಎರಡು ಮೂಲ ಕ್ರಯಪತ್ರಗಳು ಮತ್ತು ದಿನಾಂಕಃ 21–07–1966 ರಂದು ಆದ ಮೂಲ ಕ್ರಯಪತ್ರಗಳನ್ನು ಮನೆಯಲ್ಲಿ ಇಟ್ಟಿದ್ದೆವು , ಸಿಕ್ಕಿರುವುದಿಲ್ಲ , ಆ ಕಾರಣ ಅವುಗಳ ಧೃಡೀಕೃತ ಪ್ರತಿಗಳನ್ನು ಹಾಜರು ಪಡಿಸಿರುತ್ತೇನೆ . ಸದರಿ ಕ್ರಯಪತ್ರಗಳನ್ನು ಭೀಮೇಗೌಡ ಎನ್ನುವವರು ಬರೆದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ , ಆದರೆ ಇರಬಹುದು . ಸದರಿ ಭೀಮೇಗೌಡರು ನಿಮ್ಮ ಊರಿನ ಗೋಪಾಲರೆಡ್ಡಿರವರ ತಂದೆ ಇರುತ್ತಾರೆ ಎಂದರೆ ಸರಿ .

ಮೃತ ದೊಡ್ಡೀರಾಮಪ್ಪನ ಮಕ್ಕಳು ರಾಮಚಂದ್ರಪ್ಪ , ರಾಮಕೃಷ್ಣಪ್ಪ , ರಾಮರಾಜು ಮತ್ತು ಜಯಲಕ್ಷ್ಮಮ್ಮ ಅಂತ ಇರುತ್ತಾರೆ . ದಿಃ 12–9–1965 ರ ದಿನಾಂಕಕ್ಕೆ ಮೃತ ದೊಡ್ಡೀರಾಮಪ್ಪನ ಮಕ್ಕಳಾದ ರಾಮಚಂದ್ರಪ್ಪ , ರಾಮಕೃಷ್ಣಪ್ಪ ಮತ್ತು ಜಯಲಕ್ಷ್ಮಮ್ಮ ಹುಟ್ಟಿದ್ದರು , ರಾಮರಾಜು ಹುಟ್ಟಿರಲಿಲ್ಲ . ದಿನಾಂಕಃ 1–6–1956 ರಂದು ರಾಮಚಂದ್ರಪ್ಪ ಹುಟ್ಟಿರುತ್ತಾರೆ ಎಂದರೆ ಸರಿ . ದಿನಾಂಕಃ 1–6–1966 ರಂದು ರಾಮರಾಜು ಹುಟ್ಟಿರುತ್ತಾರೆ ಎಂದರೆ ಸರಿ . ದಿಃ 21–7–1966 ಕ್ಕೆ ದೊಡ್ಡೀರಾಮಪ್ಪನ 4 ಜನ ಮಕ್ಕಳು ಹುಟ್ಟಿರುತ್ತಾರೆ ಎಂದರೆ ಇರಬಹುದು .

ನಿಡಿ 1 ರಿಂದ 3 ರಲ್ಲಿ ದೊಡ್ಡೀರಾಮಪ್ಪನ ಮಕ್ಕಳು ಅಪ್ರಾಪ್ತವಯಿಗಳು ಆಗಿರುತ್ತಾರೆ ಅಂತ ನಮೂದಿಸಿರುವುದಿಲ್ಲ ಎಂದರೆ ಸರಿ . ನಿಡಿ 1 ರಿಂದ 3 ರಲ್ಲಿ ದೊಡ್ಡೀರಾಮಪ್ಪನ ಅಪ್ರಾಪ್ತವಯಿ ಮಕ್ಕಳಿಗೂ ಹಕ್ಕು ಇರುವ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ . ಮೂಲಪುರುಷ ಈರರಾಮಪ್ಪನ ಮಕ್ಕಳು ಒಟ್ಟು ಕುಟುಂಬದ ಆಸ್ತಿಯನ್ನುವಿಭಾಗ ಮಾಡಿಕೊಂಡ ಕುರಿತು ಏನಾದರೂ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಅವರು ಮೌಖಿಕವಾಗಿ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ .

ಮೂಲಪುರುಷ ಈರರಾಮಪ್ಪನ ಮಕ್ಕಳು ಒಟ್ಟು ಕುಟುಂಬದ ಆಸ್ತಿಯನ್ನು ವಿಭಾಗ ಮಾಡಿಕೊಂಡ ಕುರಿತು ನೊಂದಾಯಿತ ವಿಭಾಗಪತ್ರವನ್ನಾಗಲೀ ಅಥವಾ ನೊಂದಾಯಿತವಲ್ಲದ ವಿಭಾಗ ಪತ್ರವನ್ನಾಗಲೀ ನೀವು ಹಾಜರು ಪಡಿಸಿಲ್ಲ ಎಂದರೆ ಸರಿ . ದೊಡ್ಡೀರಾಮಪ್ಪನಿಗೆ ಒಟ್ಟು ಆಸ್ತಿಗಳಲ್ಲಿ 1/8 ಭಾಗವಿತ್ತು ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ನಿಡಿ 1 ರಿಂದ 3 ರಲ್ಲಿ ಒಟ್ಟು ಕುಟುಂಬದ ಸದಸ್ಯರ ಹೆಸರುಗಳನ್ನು ನಮೂದಿಸಿಲ್ಲ ಎಂದರೆ ಸಾಕ್ಷಿಯು ನಿಡಿ 1 ರಿಂದ 3 ರ ಕಾಲಕ್ಕೆ ಮೌಖಿಕವಾಗಿ ವಿಭಾಗ ಮಾಡಿಕೊಂಡ ಆಧಾರದ ಮೇರೆಗೆ ಮಾರಾಟಗಾರರು ಸ್ವಾಧೀನ ಅನುಭವದಲ್ಲಿದ್ದುದರಿಂದ , ಆಸ್ತಿಗಳನ್ನು ಕ್ರಯಕ್ಕೆ ಪಡೆದಿರುತ್ತೇವೆ ಎಂದು ನುಡಿಯುತ್ತಾರೆ. ಈರರಾಮಪ್ಪನ ಕುಟುಂಬದ ಸದಸ್ಯರಿಗೆ ಆಸ್ತಿಗಳಲ್ಲಿ 1/8 ನೇ ಭಾಗ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ .

ದೊಡ್ಡೀರಾಮಪ್ಪ ಬರವಣಿಗೆಯ ಸಹಿಯನ್ನು ಮಾಡುತ್ತಿದ್ದರು . ದೊಡ್ಡೀರಾಮಪ್ಪ ಬರವಣಿಗೆ ಸಹಿ ಮಾಡುತ್ತಿದ್ದರು ಎನ್ನುವ ಬಗ್ಗೆ ನೀವು ಮೂಲ ಕ್ರಯಪತ್ರವನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ನಾವು ಧೃಡೀಕೃತ ಕ್ರಯಪತ್ರವನ್ನು ಹಾಜರು ಪಡಿಸಿರುತ್ತೇವೆ ಎಂದು ನುಡಿಯುತ್ತಾರೆ . ನಿಡಿ 1 ರಿಂದ 3 ನನ್ನ ಚಿಕ್ಕಪ್ಪನ ಹೆಸರಿಗೆ ನೊಂದಾವಣಿಯಾಗಿರುತ್ತದೆ , ಆ ಕಾಲಕ್ಕೆ ನಾನು 16–17 ವರ್ಷ ವಯಸ್ಸಿನವನಾಗಿದ್ದೆನು , ಸದರಿ ದಾಖಲಾತಿಗಳಿಗೆ ಯಾರು ಯಾರು ಸಹಿ ಮಾಡಿರುತ್ತಾರೆ ಅಂತ ನನಗೆ ಹೇಳಲು ಆಗುವುದಿಲ್ಲ .

ನಿಡಿ 1 ರಿಂದ 3 ಅನ್ನು ದೊಡ್ಡೀರಾಮಪ್ಪ ಬಿನ್ ಈರರಾಮಪ್ಪ , ಸಣ್ಣರಾಮಪ್ಪ ಬಿನ್ ಈರರಾಮಪ್ಪ ಮತ್ತು ಕರಿಯಪ್ಪ ಬಿನ್ ರಾಮಪ್ಪ , ಸದರಿ 3 ಜನರು ಮಾತ್ರ ಸದರಿ ಕ್ರಯಪತ್ರಗಳನ್ನು ಬರೆದುಕೊಟ್ಟಿರುತ್ತಾರೆ . ಒಟ್ಟು 8 ಜನರ ಪೈಕಿ 3 ಜನರ ಭಾಗದ ಆಸ್ತಿಯನ್ನು ಮಾತ್ರ ನಿಡಿ 1 ರಿಂದ 3 ರಲ್ಲಿ ಬರೆಸಿಕೊಂಡಿರುತ್ತೀರಿ ಎಂದರೆ ಸರಿ . ನಿಮಗೆ ಮಾರಾಟ ಮಾಡಿದ ಆಸ್ತಿಯನ್ನು ಹೊರತು ಪಡಿಸಿ ಉಳಿಕೆ 5 ಜನರ 5 ಭಾಗದ ಆಸ್ತಿಯು ಹಾಗೇ ಉಳಿದಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ .

ಒಟ್ಟು ಈರರಾಮಪ್ಪನ 8 ಜನ ಮಕ್ಕಳಲ್ಲಿ , ಮೇಲಿನ 3 ಜನಮಕ್ಕಳಿಗೂ ಮತ್ತು ಉಳಿಕೆ 5 ಮಕ್ಕಳಿಗೂ ವಾರಸುದಾರರು ಇರುತ್ತಾರೆ ಎಂದರೆ ಸರಿ . ಕರಿಯಪ್ಪ ಬಿನ್ ರಾಮಪ್ಪ ಅಂದರೆ ಈರರಾಮಪ್ಪನ ಮೊಮ್ಮಗ ಇರುತ್ತಾನೆ . ದಾವಾ ಆಸ್ತಿ ಐಟಂ ನಂ.1 ಮತ್ತು 2 ರ ಮೂಲ ಪುರುಷ ಈರರಾಮಪ್ಪ ಇರುತ್ತಾನೆ ಎಂದರೆ ಸರಿ .

ಈರರಾಮಪ್ಪನ ಮಕ್ಕಳು , ಭೂವಜ್ಜಪ್ಪ , ರಾಮಪ್ಪ , ಸಣ್ಣಕರಿಯಪ್ಪ , ಸಣ್ಣರಾಮಪ್ಪ , ದೊಡ್ಡೀರ ರಾಮಪ್ಪ , ಸಣ್ಣೀರ ರಾಮಪ್ಪ , ರಾಮಕ್ಕ ಮತ್ತು ಸಣ್ಣಮ್ಮ ಇರುತ್ತಾರೆ ಎಂದರೆ ಸರಿ . ನಿಡಿ 1 ರಿಂದ 3 ರಂದು ಈರರಾಮಪ್ಪನ ಮಕ್ಕಳು ವಿಭಾಗ ಪತ್ರವನ್ನು ಹಾಜರು ಪಡಿಸಿದ್ದರೇ ಎಂದರೆ ಸಾಕ್ಷಿಯು ಆಗ ನಾನು ಚಿಕ್ಕವನಿದ್ದೆನು ಎಂದು ನುಡಿಯುತ್ತಾರೆ . ದಾವಾ ಆಸ್ತಿಗಳಲ್ಲಿ ಮತ್ತು ಇತರೆ ಆಸ್ತಿಗಳಲ್ಲಿಯೂ ವಾದಿಯರು ಹಾಗೂ ಈರರಾಮಪ್ಪನ ಎಲ್ಲಾ ವಾರಸುದಾರರು ಜಂಟಿಯಾಗಿ ಇಂದಿನವರೆಗೂ ಸ್ವಾದೀನದಲ್ಲಿರುತ್ತಾರೆ ಎಂದರೆ ಸಾಕ್ಷಿಯು ಈರರಾಮಪ್ಪನ 6 ಜನ ಗಂಡು ಮಕ್ಕಳು ಭಾಗವನ್ನು ಮಾಡಿಕೂಂಡಿರುತ್ತಾರೆ , ಅವುಗಳಲ್ಲಿ ನಾವು ಕ್ರಯಕ್ಕೆ ಪಡೆದ ಆಸ್ತಿಗಳಲ್ಲಿ ನಾವು ಇರುತ್ತೇವೆ, ಉಳಿಕೆ ಆಸ್ತಿಗಳಲ್ಲಿ ಅವರವರ ಭಾಗದಂತೆ ಇರುತ್ತಾರೆ ಎಂದು ನುಡಿಯುತ್ತಾರೆ .

ಈರರಾಮಪ್ಪನ ಮಕ್ಕಳು ಬರವಣಿಗೆ ಮೂಲಕ ವಿಭಾಗ ಮಾಡಿಕೊಂಡ ಕುರಿತು ನನಗೆ ಗೊತ್ತಿಲ್ಲ , ಆದರೆ ಮೌಖಿಕವಾಗಿ ಮಾತ್ರ ಮಾಡಿಕೊಂಡಿರುತ್ತಾರೆ . ದಾವಾ ಆಸ್ತಿಗಳಲ್ಲಿ ಯಾರು ಯಾರು ಭಾಗ ಮಾಡಿಕೊಂಡು , ಯಾರ್ಯಾರಿಗೆ ಎಷ್ಟು ಎಷ್ಟು ಅಳತೆಯ ಜಮೀನು ಬಂದಿರುತ್ತದೆ ಎನ್ನುವ ಬಗ್ಗೆ ನಿಮಗೆ ಹೇಳಲು ಆಗುತ್ತದೆಯೇ ಎನ್ನು ವ ಪ್ರಶ್ನೆಗೆ ಸಾಕ್ಷಿಯು ಈರರಾಮಪ್ಪನ 6 ಜನ ಗಂಡು ಮಕ್ಕಳು ಮಾತ್ರ ಭಾಗ ಮಾಡಿಕೊಂಡಿರುತ್ತಾರೆ , ದಾವಾ ಆಸ್ತಿ ಐಟಂ ನಂ.1 ಮತ್ತು 2 ರಲ್ಲಿ ಗ್ರಾಮಠಾಣಕ್ಕೆ ಅಂತ ಒಟ್ಟು 42 ಗುಂಟೆ , ಉಳಿಕೆ ಜಮೀನನ್ನು ತಲಾ 2 ಎಕರೆ ಅಂತ ನೀಡಿರುತ್ತಾರೆ ಎಂದು ನುಡಿಯುತ್ತಾರೆ . ತಲಾ 2 ಎಕರೆ ಆಸ್ತಿಯನ್ನು ತೆಗೆದುಕೊಂಡ ಬಗ್ಗೆ ಬರವಣಿಗೆ ಮಾಡಿಕೊಂಡಿರುವುದಿಲ್ಲ .

ದಾವಾ ಆಸ್ತಿಗಳಲ್ಲಿ ಈರರಾಮಪ್ಪನ 8 ಜನ ಮಕ್ಕಳು ಭಾಗ ಮಾಡಿಕೊಂಡು ಸ್ವಾದೀನದಲ್ಲಿರುತ್ತಾರೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು 6 ಜನ ಮಕ್ಕಳು ಭಾಗ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ . ಈರರಾಮಪ್ಪನ ಎಲ್ಲಾ ವಾರಸುದಾರರ ಹೆಸರುಗಳನ್ನು ನನಗೆ ಹೇಳಲು ಆಗುವುದಿಲ್ಲ . ದೊಡ್ಡೀರಾಮಪ್ಪನಿಗೆ ಬರುವ 1/8 ನೇ ಭಾಗದಲ್ಲಿ , ವಾದಿಯರಿಗೆ 1/4 ನೇ ಭಾಗ ಆಸ್ತಿಗಳಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ದೊಡ್ಡೀರಾಮಪ್ಪನ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ . ದೊಡ್ಡೀರಾಮಪ್ಪನ ಮಕ್ಕಳು ವಿಭಾಗ ಮಾಡಿಕೊಂಡ ಕುರಿತು ನನಗೆ ಗೊತ್ತಿಲ್ಲ . ದಾವಾ ಆಸ್ತಿಗಳು ವಾದಿಯರ ಪಿತ್ರಾರ್ಜಿತ ಆಸ್ತಿಗಳಾದ್ದರಿಂದ , ಆಸ್ತಿಗಳಲ್ಲಿ ಅವರಿಗೆ ಭಾಗವಿರುತ್ತದೆ ಎಂದರೆ ಸಾಕ್ಷಿಯು ವಾದಿಯರಿಗೆ ಬಂದ ಸ ನಂ 167/1 ರಲ್ಲಿ ಬಂದ ಆಸ್ತಿಯನ್ನು ಬಡಪ್ಪನ ಮಕ್ಕಳಿಗೆ ಮಾರಾ ಮಾಡಿರುತ್ತಾರೆ , ರಾಮಕೃಷ್ಣಪ್ಪ ಮತ್ತು ರಾಮಚಂದ್ರಪ್ಪನ ಮಕ್ಕಳು ಉಳಿಕೆ ಆಸ್ತಿಯನ್ನು ಅನುಭವಿಸುತ್ತಿರುತ್ತಾರೆ ಎಂದು ನುಡಿಯುತ್ತಾರೆ .

ಸ ನಂ 167/1 ರಲ್ಲಿ ದೊಡ್ಡೀರಾಮಪ್ಪನ ಗಂಡು ಮಕ್ಕಳು ಭಾಗವನ್ನು ತೆಗೆದುಕೊಂಡಿರುತ್ತಾರೆ , ಆದರೆ ಹೆಣ್ಣು ಮಕ್ಕಳಿಗೆ ಅದರಲ್ಲಿ ಭಾಗ ಕೊಟ್ಟಿರುವುದಿಲ್ಲ . ಸ ನಂ 167 ಒಟ್ಟು ಎಷ್ಟು ವಿಸ್ತೀರ್ಣ ಇದೆ ಅಂತ ನನಗೆ ಗೊತ್ತಿಲ್ಲ . ಸ ನಂ 167 ರಲ್ಲಿ ಸಣ್ಣರಾಮಪ್ಪನವರು ದೊಡ್ಡೀರಾಮಪ್ಪನ ಭಾಗವನ್ನು ಕ್ರಯಕ್ಕೆ ಪಡೆದಿರುತ್ತಾರೆ . 1 ನೇ ವಾದಿಯನ್ನು ಬಿಟ್ಟು ಆತನ ಅಣ್ಣ ತಮ್ಮಂದಿರು ಎಷ್ಟು ಎಷ್ಟು ಅಳತೆಯಲ್ಲಿ ಸ್ವಾದೀನದಲ್ಲಿರುತ್ತಾರೆ ಅಂತ ನನಗೆ ಗೊತ್ತಿಲ್ಲ . ಸಣ್ಣರಾಮಪ್ಪನಿಗೆ , ಅವರ ಸಹೋದರಲ್ಲಿ ಮಾಡಿಕೊಂಡ ಭಾಗದಿಂದ ಬಂದಿರುತ್ತದೆ . ಆ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ . ನಮ್ಮ ವಿಭಾಗ ಪತ್ರದಲ್ಲಿ ಮಾರಾಟಗಾರರ ಹೆಸರುಗಳನ್ನು ನಮೂದಿಸಿಲ್ಲ , ಆದರೆ ಸರ್ವೆ ನಂಬರುಗಳನ್ನು ನಮೂದಿಸಿರುತ್ತೇವೆ . ನೀವು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡ ವಿಷಯವು ವಾದಿಗೆ 2012 ನೇ ಸಾಲಿನಲ್ಲಿ ಗೊತ್ತಾಯಿತು , ಆಗ ವಾದಿಯು ಈ ದಾವೆ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿಯು ನಾವು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ .

ನಾವು ವಿಭಾಗ ಮಾಡಿಕೊಂಡ ನಂತರ ವಾದಿಯರು ಈ ದಾವೆ ಸಲ್ಲಿಸಿರುತ್ತಾರೆ . ಸ ನಂ 2 ರ 3 ಎಕರೆ 24 ಗುಂಟೆಯ ಚಕ್ಕುಬಂದಿ ಹೇಳುತ್ತೇನೆ ., ಪೂರ್ವಕ್ಕೆ – ಸ ನಂ.1 , ಪಶ್ಚಿಮಕ್ಕೆ – ಸ ನಂ 3 ಮತ್ತು ದೊಡ್ಡರಂಗಪ್ಪನ ಆಸ್ತಿ , ದಕ್ಷಿಣಕ್ಕೆ – ಗ್ರಾಮಠಾಣಾ , ಉತ್ತರಕ್ಕೆ – ಸ ನಂ 2 ರ ಉಳಿಕೆ ಆಸ್ತಿ ಇರುತ್ತದೆ . ಸ ನಂ 3 ರ 9 ಎಕರೆ 18 ಗುಂಟೆಯ ಚಕ್ಕುಂಬಂದಿ ಹೇಳುತ್ತೇನೆ ., ಪೂರ್ವಕ್ಕೆ – ಸ ನಂ.1 ಮತ್ತು 168 , ಪಶ್ಚಿಮಕ್ಕೆ – ದೊಡ್ಡರಂಗಪ್ಪನ ಆಸ್ತಿ , ದಕ್ಷಿಣಕ್ಕೆ – ಗ್ರಾಮಠಾಣಾ , ಉತ್ತರಕ್ಕೆ – ಮುದ್ದರಂಗಪ್ಪನ ಆಸ್ತಿ ಇರುತ್ತದೆ .

ಸ ನಂ 3 ರ 9 ಎಕರೆ 22 ಗುಂಟೆಯಲ್ಲಿ ನಿಮಗೆ ಎಷ್ಟು ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಆ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ . ಸ ನಂ 2 ರಲ್ಲಿ 3 ಎಕರೆ 12 ಗುಂಟೆಯಲ್ಲಿ ನಿಮಗೆ ಎಷ್ಟು ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾನು ಆ ಬಗ್ಗೆ ದಾಖಲಾತಿಯನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ . ನಿಡಿ 1 ರಿಂದ 3 ರಲ್ಲಿರುವ ಆಸ್ತಿಗಳ ಚಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ .

ನನ್ನ ಅಣ್ಣ ಪಾಂಡುರಂಗಪ್ಪ ರಾಜಕೀಯ ನಾಯಕರಿರುತ್ತಾರೆ . ನಿಮ್ಮ ಅಣ್ಣನ ಮಾತನ್ನು ಊರಿನ ಜನರು ಕೇಳುತ್ತಿದ್ದರು ಎಂದರೆ ಸಾಕ್ಷಿಯು ವಿಶ್ವಾಸದಿಂದ ಇದ್ದರು , ಆ ಕಾರಣ ಕೇಳುತ್ತಿದ್ದರು ಎಂದು ನುಡಿಯುತ್ತಾರೆ . 1 ನೇ ವಾದಿಯು ದಿನದ 12 ಗಂಟೆಗಳ ಕಾಲ ನಿಮ್ಮ ಅಣ್ಣನೊಂದಿಗೆ ಸಮಯ ಕಳೆಯುತ್ತಿದ್ದರು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ . ಈರರಾಮಪ್ಪನ ಮನೆಯನ್ನು ಈಗಲೂ ವಿಭಾಗ ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ . ಭಾಗ ಮಾಡಿಕೊಂಡ ಬಗ್ಗೆ ನನ್ನ ಬಳಿ ದಾಖಲಾತಿಗಳಿರುವುದಿಲ್ಲ . ಈರರಾಮಪ್ಪನವರು ತಮ್ಮ ಜೀವಿತ ಕಾಲದಲ್ಲಿ ಎಷ್ಟು ಆಸ್ತಿಗಳನ್ನು ಸಂಪಾದಿಸಿದ್ದರು ಅಂತ ನನಗೆ ತಿಳಿದಿಲ್ಲ .

ಸ ನಂ 167 ಅನ್ನು ಈರರಾಮಪ್ಪ ಸಂಪಾದನೆ ಮಾಡಿದ್ದನೆ , ದೊಡ್ಡೀರಾಮಪ್ಪ ಸಂಪಾದನೆ ಮಾಡಿದ್ದನೆ , ಸಣ್ಣೀರ ರಾಮಪ್ಪ ಸಂಪಾದನೆ ಮಾಡಿದ್ದನೆ ಅಂತ ನನಗೆ ಗೊತ್ತಿಲ್ಲ . ದಾವಾ ಆಸ್ತಿಗಳು ಕೊತ್ತೂರು ಗ್ರಾಮದ ಪಕ್ಕದಲ್ಲಿರುತ್ತವೆ ಎಂದರೆ ಸರಿ . ವಾದಿಯರು ಮತ್ತು ಅವರ ಸಹೋದರರು ಬಣವೆಗಳನ್ನು ಆಸ್ತಿಗಳಲ್ಲಿ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಗ್ರಾಮಠಾಣಕ್ಕೆ ಅಂತ ತೆಗೆದ ಆಸ್ತಿಯಲ್ಲಿ ಮಾಡಿಕೊಂಡಿರುತ್ತಾರೆ , ಸಾಕ್ಷಿ ಮುಂದುವರೆದು ಅವರು ಬಣವೆಯನ್ನು ಹಾಕಿಕೊಂಡಿರುತ್ತಾರೆ , ನಾನು ತೆಗೆದುಕೊಂಡ ಆಸ್ತಿಯನ್ನು ಹಾಗೇ ಬಿಟ್ಟಿರುತ್ತೇನೆ , ಆದರೆ ಸುಪರ್ದಿಗೆ ತೆಗೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ .

ಸ ನಂ 2 ಮತ್ತು 3 ರಲ್ಲಿ ವಾದಿಯರಿಗೆ ಯಾವುದೇ ಹಕ್ಕಿರುವುದಿಲ್ಲ , ಅವರ ತಂದೆಯು ಸದರಿ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ . ಸ ನಂ 2 ಮತ್ತು 3 ರಲ್ಲಿ ವಾದಿಯರ ದೊಡ್ಡಪ್ಪನ ಮತ್ತು ಚಿಕ್ಕಪ್ಪನ ಮಕ್ಕಳು ಎಷ್ಟು ಅಳತೆಯಲ್ಲಿ ಸ್ವಾದೀನದಲ್ಲಿರುತ್ತಾರೆ ಅಂತ ನನಗೆ ಹೇಳಲು ಆಗುವುದಿಲ್ಲ . ಈರರಾಮಪ್ಪನ ಮನೆಯಲ್ಲಿ ಯಾರು ಯಾರು ಎಷ್ಟು ಎಷ್ಟು ಅಂಕಣದಲ್ಲಿ ಇರುತ್ತಾರೆ ಅಂತ ನನಗೆ ಹೇಳಲು ಆಗುವುದಿಲ್ಲ .

(ವಕೀಲರು ಮುಂದುವರೆದ ಪಾಟೀಸವಾಲಿಗಾಗಿ ಸಮಯ ಕೋರಿದ್ದರಿಂದ ರೂ.100/- ಖರ್ಚು ವಿಧಿಸಿ ಮುಂದೂಡಲಾಯಿತು )

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯ ಗಣಕಯಂತ್ರದಲ್ಲಿ ಬೆರಳಚ್ಚುಮಾಡಲಾಯಿತು )

**ಓ ಹೇ ಕೇ ಸರಿ ಇದೆ**

**ಪಿ.ಸಿ.ಜೆ. ಮತ್ತು ಜೆಎಂಎಫ್‌ಸಿ**
**ಪಾವಗಡ.**